**<u>ಸಾಕ್ಷಿಯನ್ನು ದಿಃ 09.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ-</u>**

ನನಗೆ ಸಹಿ ಮಾಡಲು ಬರುತ್ತದೆ. ಸಕ್ಷಿಗೆ ಒಂದು ದಾಖಲೆಯ ಜರಾಕ್ಸ್ ಪ್ರತಿ ತೋರಿಸಿ ಅದರಲ್ಲಿರುವ ಸಹಿ ತನ್ನದೆಂದು ಒಪ್ಪಿರುತ್ತಾರೆ. ಸದರಿ ಸಹಿಯನ್ನು ದಿಃ 31.03.1990 ನೇ ಇಸವಿಯಲ್ಲಿ ನಮ್ಮ ಗ್ರಾಮದಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಯಾಲಕ್ಕಿಗೌಡ ಎಂಬುವವರ ಮದುವೆ ಸಂಬಂಧವಾಗಿ ಹಿರಿಯ ಸಮ್ಮುಖದಲ್ಲಿ ಸದರಿ ದಾಖಲೆ ಮಾಡಿದ್ದು ಆಗ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೂಕನಹಳ್ಳಿ ಗ್ರಾಮದ ದೊಡ್ಡೇಗೌಡರ ಮಗ ಯಾಲಕ್ಕಿಗೌಡ, ಮಾಯೇಗೌಡರ ಮಗಳು ಹೇಮಮ್ಮ ರವರ ನಡುವೆ ಮದುವೆಗೆ ಸಂಬಂಧಪಟ್ಟಂತೆ ಈ ಕರಾರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ಯಾಲಕ್ಕಿಗೌಡ ಎಂದು ಇದ್ದರು ಶಂಕ್ರೇಗೌಡ ಎಂದು ಸುಳ್ಳಾಗಿ ನಮೂದಿಸಿ ಕೇಸ್ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮೂಕನಹಳ್ಳಿ ಗ್ರಾಮದ ಸರ್ವೆ ನಂ. 99/1 ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ . ನಲ್ಲಿ 3 ಎಕರೆ 8 ಗುಂಟೆ ಇದೆ. ಸದರಿ ಜಮೀನು ರಮೇಶ್ ಮತ್ತು ಯೋಗೇಶ್ ಎಂಬುವವರ ಹೆಸರಿನಲ್ಲಿ ಇದೆ. ಕೇಸ್ ನನ್ನಂತೆ ಆದ ಮೇಲೆ ಅದನ್ನು ಅವರಿಗೆ ನಾನೇ ಮಾರಾಟ ಮಾಡಿರುತ್ತೇನೆ. ಕೇಸ್ ಬಾಕಿ ಇರುವಾಗ ಮಾರಾಟ ಮಾಡಿರುವುದು ಕಾನೂನು ಭಾಹಿರ ಎಂದರೆ ಸರಿಯಲ್ಲ. ತಂದೆಗೆ ಸೇರಿದ ಪಿತ್ರಾರ್ಜಿತ ಮನೆ ಇದ್ದು ಅದನ್ನು ಈ ದಾವೆಯಲ್ಲಿ ಸೇರಿಸಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹಾಕಲು ನನ್ನ ಅಕ್ಕನ ಮಗ ನಾಗರಾಜು ಮಾಹಿತಿ ಕೊಟ್ಟಿದ್ದರು. ಸ್ವತ್ತುಗಳನ್ನು ಅವನು ಹೇಳಿದ ರೀತಿ ಸೇರಿಸಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ದಾವಾ ಪತ್ರದಲ್ಲಿ ಯಾವುದೆಲ್ಲಾ ಸೇರಿಸಿದ್ದಾರೆಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಪತ್ರದಲ್ಲಿ ಏನೇನು ಬರೆಸಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಕೇಸ್ ನ ವಿಚಾರ ನನಗೆ

ಗೊತ್ತಿಲ್ಲದಿದ್ದರೂ ನನ್ನ ಅಣ್ಣ ಮತ್ತು ಅಣ್ಣನ ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಈ ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 99/1 ರ ಅನ್ನು ನಾನು ನನ್ನ ಅಣ್ಣನಿಗೆ ಮೋಸ ಮಾಡಿ ಮಾರಾಟ ಮಾಡಿದ್ದರೂ ದಾವಾ ಸ್ವತ್ತಿನಲ್ಲಿ ಅನ್ಯತಾ ಫಾಯಿದೆ ಹೊಂದಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಯಾವುದೆ ವಿಚಾರ ಗೊತ್ತಿಲ್ಲದಿದ್ದರೂ ಅಕ್ಕನ ಮಗನ ಮಾತು ಕೇಳಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಬಿ.ಕೆ.ಎಸ್ ವಕೀಲರಿಂದಃ</u>**

ಶ್ರೀ ಬಿ.ಕೆ.ಎಸ್ ವಕೀಲರನ್ನು ಕೂಗಿ ಕರೆಯಿಸಲಾಗಿ ಕೊನೆಯ ಅವಕಾಶಕ್ಕಾಗಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.